10

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ (ಕೋವಿಡ್-19)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 27/8/2020

## ಅಧಿವೇಶನಕ್ಕೆ ಸೋಂಕು ಹಾವಳಿ

**ಅಮೃತಸರ:** ಪಂಜಾಬ್‌ನಲ್ಲಿ ಅತಿ ಹೆಚ್ಚು ಶಾಸಕರಿಗೆ ಕೊರೊನಾ ಸೋಂಕು ತಗುಲಿದ್ದು, ಶುಕ್ರವಾರದಿಂದ ಆರಂಭವಾಗುವ ವಿಧಾನಸಭಾ ಅಧಿವೇಶನ ಅತಂತ್ರಕ್ಕೆ ಸಿಲುಕಿದೆ. ಇದುವರೆಗೂ ರಾಜ್ಯದ 23 ಶಾಸಕರಿಗೆ ಸೋಂಕು ದೃಢಪಟ್ಟಿದೆ. ರಾಜಧಾನಿ ದಿಲ್ಲಿಯಲ್ಲಿ ಕೊರೊನಾ ಸೋಂಕು ಹಾವಳಿ ಹೆಚ್ಚಿದ್ದು, ಇದರ ಮಗ್ಗಲಿನ ಪಂಜಾಬಿಗೂ ಅದರ ಸೋಂಕು ಬಾಧೆ ವ್ಯಾಪಕವಾಗಿ ಪಸರಿಸಿದೆ. ವಿಧಾನಸಭೆ ಮುಂಗಾರು ಅಧಿವೇಶನಕ್ಕೆ ದಿನಾಂಕ ನಿಗದಿಯಾಗಿದ್ದು, ಸೋಂಕಿ ನಡುವೆ ಸದನ ನಡೆಸುವ ಸವಾಲು ಎದುರಾಗಿದೆ. ''ಅಧಿವೇಶನದ ವೇಳೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಪ್ರತಿ ಶಾಸಕರು ಮಾಸ್ಕ್ ಧರಿಸುವುದು ಮತ್ತು ಸ್ಯಾನಿಟೈಸ್ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ,'' ಎಂದು ಪಂಜಾಬಿನ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.